
### ಗರಿಕೆ ಹುಲ್ಲು

ಸಾಮಾನ್ಯವಾಗಿ ಮನೆಯಂಗಳದಲ್ಲಿ, ಗದ್ದೆ ಬದುಗಳಲ್ಲಿ ಬೆಳೆಯುವ ಔಷಧೀಯ ಸಸ್ಯ ಗರಿಕೆ. ಇದನ್ನು ಗಣೇಶ ಹಬ್ಬ, ಸಂಕಷ್ಟ ಚತುರ್ಥಿಯಂದು ಗಣಪತಿಗೆ ಅರ್ಪಿಸಲಾಗುತ್ತದೆ. ಬಹುಪಾಲು ಜನ ಗಜಮುಖನಿಗೆ 21 ಗರಿಕೆ ಅರ್ಪಿಸುವುದು ವಾಡಿಕೆ. ಸುಂದರವಾದ ಕಡ್ಡಿ ರೂಪದ 21 ಗರಿಕೆಗಳನ್ನು ಬೆಳ್ಳಿಯಲ್ಲಿ ಕೇವಲ 8 ಗ್ರಾಂನಲ್ಲಿ ತಯಾರಿಸಲಾಗಿದೆ.



## ಹಳೆಯ ಹೊನ್ನಿಗೆ ಹೊಸತನದ ಸ್ಪರ್ಶ

# ಸಮಕಾಲೀನ ಆಭರಣ



ಸಮಕಾಲೀನ ಉಡುಪಿಗೆ ಸಮಕಾಲೀನ ಒಡವೆ ಟ್ರೆಂಡ್ ಎನಿಸಿಬಿಟ್ಟಿದೆ. ಸಾಂಪ್ರದಾಯಿಕ ಹಬ್ಬಕ್ಕೆ ಪಾರಂಪರಿಕ ಉಡುಪು, ಒಡವೆಗಳು ಉತ್ತಮ ಸಾಥಿ ಕೊಡುತ್ತಿವೆ. ಇದಕ್ಕಾಗಿಯೇ ಟೆಂಪಲ್ ಆಭರಣ, ಹೆರಿಟೇಜ್ ಆಭರಣಗಳು ಆಧುನಿಕ ಸ್ಪರ್ಶದೊಂದಿಗೆ ಮತ್ತೆ ಮಾರುಕಟ್ಟೆಗೆ ಬಂದಿದೆ. ಹಬ್ಬಗಳ ದಿನ, ಮದುವೆಯಂತಹ ಸಾಂಪ್ರದಾಯಿಕ ದಿನಗಳಿಗೆ ಹೇಳಿ ಮಾಡಿಸಿದಂತಿವೆ ಇಂಥ ಒಡವೆಗಳು.

ಸಿಂಗಲ್‌ಪೀಸ್ ಆರ್ನಮೆಂಟ್, ಸಿಗ್ನೇಚರ್ ಒಡವೆಗಳು, ಪರ್ಲ್, ಎಮರಾಲ್ಡ್, ರೂಬಿಯಂತಹ ಮೌಲ್ಯಯುತ ಹರಳು (ಪ್ರೆಷಿಯಸ್ ಸ್ಟೋನ್ಸ್)ಗಳಿಂದ ತಯಾರಿಸಿದ ಒಡವೆಗಳು ಕಂಟೆಂಪರರಿ ಆಭರಣ ಎನಿಸಿದ್ದು, ಟ್ರೆಂಡ್ ಕೂಡ ಆಗಿಬಿಟ್ಟಿದೆ.

ಆಧುನಿಕ ಮನೋಭಾವದ ಯುವತಿಯರಿಗಾಗಿಯೇ ಅತ್ಯಂತ ಹಗುರವಾದ, ಒಂದೇ ಎಳೆಯ ಸರ, ಧರಿಸಲು ಆರಾಮದಾಯಕವಾದ ಕಿವಿಯೋಲೆ, ಸ್ಟಡ್‌ಗಳು, ಸಿಂಗಲ್ ಸ್ಟೋನ್ ರಿಂಗ್, ಸಪುರವಾದ ಬ್ರೇಸ್ಲೆಟ್‌ಗಳು ಸಮಕಾಲೀನ ಒಡವೆ ಎನಿಸಿದ್ದು, ಮಹಿಳೆಯರ ಅಭಿರುಚಿ, ಆಸಕ್ತಿಗೆ ತಕ್ಕಂತೆ ವಿನ್ಯಾಸಗಾರರು ತಯಾರಿಸಿ ಮಾರುಕಟ್ಟೆಗೆ ತಂದಿದ್ದಾರೆ. ಕಾಸಿನ ಸರ ಹೆಸರು ಕೇಳಿದಾಕ್ಷಣ ಮನಸ್ಸು ಅಜ್ಜಿಯರ ಕಾಲಕ್ಕೆ ಓಡುತ್ತದೆ. ಆದರೆ ಇದೀಗ ಇದೇ ಕಾಸಿನ ಸರ ಹೊಸ ಸ್ಪರ್ಶದೊಂದಿಗೆ ಪುಟ್ಟಮಕ್ಕಳ ಕೊರಳನ್ನು ಅಲಂಕರಿಸುತ್ತಿದೆ. ತಾಯಂದಿರು ತೊಡುತ್ತಿದ್ದ ಕೆಂಪು ಹರಳಿನ ಫಳಕನೆ ಮಿಂಚುವ ಕಿವಿಯೋಲೆ ಮಗಳ ಕಿವಿಯಲ್ಲಿ ರಾರಾಜಿಸುತ್ತಿವೆ. ಹಳೆಯ ಫ್ಯಾಷನ್ ಎನಿಸಿದ್ದ ಎಲ್ಲ ಆಭರಣಗಳಿಗೆ ಹೊಸ ಸ್ಪರ್ಶ ಸಿಕ್ಕಿ ಸಮಕಾಲೀನ ಟ್ರೆಂಡ್ ಎನಿಸಿದೆ. ಚಂದದ ನೆಕ್ಲೇಸ್, ಅಂದದ ಬಳೆ, ಬೈತಲೆಬೊಟ್ಟು ಎಲ್ಲವೂ ಪುಟ್ಟಪುಟ್ಟ ಹುಡುಗಿಯರ ಮೆಚ್ಚು ಆಗಿದೆ.

ಸಂಪ್ರದಾಯದ ಒಡವೆಗಳು ಫ್ಯಾಷನ್‌ನೊಂದಿಗೆ ಅವಿನಾಭಾವ ಸಂಬಂಧ ಹೊಂದಿ ಸಮಕಾಲೀನ ಟ್ರೆಂಡ್‌ನೊಂದಿಗೆ ಯುವತಿಯರ ಮನತಣಿಸುತ್ತಿದೆ. ಹೊನ್ನಿನ ಮೇಲೆ ಮುತ್ತು, ಪಚ್ಚೆ, ನೀಲ, ರೂಬಿ, ಹವಳಗಳನ್ನು ಕೂರಿಸಿ ಹೊಸ ವಿನ್ಯಾಸದೊಂದಿಗೆ ಬಂದ ಆಭರಣ ಸಲ್ವಾರ್, ಜರಿಲಂಗ, ಸೀರೆಯ ಬಣ್ಣಕ್ಕೆ ಮ್ಯಾಚಿಂಗ್ ಆಗಿ 'ಮಿಕ್ಸ್ ಅಂಡ್ ಮ್ಯಾಚ್' ಆಗಿಯೂ ಕಣ್ಮನ ಸೆಳೆಯುತ್ತಿದೆ.



'ಟು ಇನ್ ವನ್' ಒಡವೆಯ ಪರಿಕಲ್ಪನೆ ಇಂದು ನಿನ್ನೆಯದಲ್ಲ. ಅದನ್ನು ಒಡವೆಗಳಲ್ಲಿ ಒಡಮೂಡಿಸಿ, ಜುಮ್ಕಾ, ಜಡೆಬಿಲ್ಲೆಗಳನ್ನು ನೆಕ್‌ಪೀಸ್ ಆಗಿಯೂ ಬಳಸಿದಾಗ ಸಖತ್ ಲುಕ್ ಬರುತ್ತದೆ. ಉದ್ದದ ಸರವನ್ನು ಎರಡೆಳೆಯಾಗಿ ಧರಿಸಿ ಗಿಡ್ಡವಾಗಿ ಕತ್ತು ತುಂಬ ಕಾಣಬೇಕೆನಿಸಿದರೆ ನೆಕ್ಲೇಸ್ ತರ ಫೋಲ್ಡ್ ಮಾಡಿಯೂ ಧರಿಸಿಕೊಳ್ಳಬಹುದು. ಒಂದೇ ಒಡವೆ 'ಮಲ್ಟಿಪರ್ಪಸ್ ಆಭರಣ'ವಾಗಿಯೂ ಬಳಸಬಹುದು. ಇದು ಇಂದಿನ ಸಮಕಾಲೀನ ಒಡವೆಯಂತೆಯೂ ಕಾಣುತ್ತದೆ ಎನ್ನುತ್ತಾರೆ ಬೆಂಗಳೂರಿನ ಒಡವೆ ವಿನ್ಯಾಸಗಾರ ಪವನ್ ಕುಮಾರ್.

ಚಿನ್ನದ ಅಡಿಪಾಯವಿರುವ ಒಡವೆಗೆ ಅಮೆರಿಕನ್ ಡೈಮಂಡ್, ಕಲರ್ ಡೈಮಂಡ್, ಮುತ್ತು, ಹವಳ, ನೀಲ ಪಚ್ಚೆ ಮುಂತಾದ ನವರತ್ನಗಳನ್ನು ಸೇರಿಸಿ ಕಸೂತಿ ವಿನ್ಯಾಸದಲ್ಲಿ ಸಿದ್ಧಪಡಿಸಿದ ಒಡವೆ ಇಂದಿನ ಹೊಸ ಫ್ಯಾಷನ್ ಟ್ರೆಂಡ್. ಕಂಠಿಹಾರ, ಕಾಸಿನ ಸರ, ಗೆಜ್ಜೆಮಾಲಾಕ್, ಅವಲಕ್ಕಿ ಸರ, ಕೊತ್ತಂಬರಿ ಸರ, ಜುಮುಕಿ, ಕಿವಿಯೋಲೆ ಅಷ್ಟೇ ಏಕೆ ಹಳೆಯ ಬೆಳ್ಳಿಯ ಒಡವೆ ಕೂಡ ಹೊಸ ವಿನ್ಯಾಸ ಪಡೆದುಕೊಳ್ಳುತ್ತಿದೆ.

ಚಿನ್ನದ ಒಡವೆಗೆ ಹೊನ್ನಿನಲ್ಲೇ ಮಾಡಿದ ದೇವಾನುದೇವತೆಗಳನ್ನು ಚಿತ್ರಿಸಿ ಮಾಡುವ ಒಡವೆಗಳೂ ಎವರ್‌ಗ್ರೀನ್ ಟ್ರೆಂಡ್' ಎನಿಸಿವೆ.

■ ಯು.ಎ.

